(ಪ್ರಾ.ಸಾ. 1 / ಚಾ.ಸಾ.1)

ತಾಃ 03-03-2020 ರಂದು ಸಾಕ್ಷಿಯನ್ನು ಪುನಃ ಕರೆದು ಪ್ರಮಾಣ ವಚನ ಮಾಡಿಸಲಾಯಿತು.

**ಪಾಟೀ ಸವಾಲುಃ ಎಂ ಆರ್ ಎನ್ ಆರೋಪಿತರ ಪರ ವಕೀಲರಿಂದ ಃ**

ನವಾಜ್ ನನ್ನ ಸ್ವಂತ ಮಗ ಅಲ್ಲ ಎನ್ನುವುದು ಸರಿ. ಆತನ ತಂದೆಯ ಹೆಸರು ಅಬ್ದುಲ್ ಜಬ್ಬರ್ ಎನ್ನುವುದು ಸರಿ. ಸದರಿ ಅಬ್ದುಲ್ ಜಬ್ಬರ್ ನವಾಜ್‌ನ 7ನೇ ವಯಸ್ಸಿನಲ್ಲಿ ಕಾಲವಾದರು ಎನ್ನುವುದು ಸರಿ. ನವಾಜ್‌ರವರ ತಾಯಿಯ ಹೆಸರು ಶಮಾ. ಸದರಿ ಶಮಾ ಈಗ ನನ್ನ ಹೆಂಡತಿ ಎನ್ನುವುದು ಸರಿ. ಇಲ್ಲಿಗೆ 23 ವರ್ಷದ ಹಿಂದೆ ನನ್ನ ಮತ್ತು ಸದರಿ ಶಮಾರವರ ಮದುವೆಯಾಗಿರುತ್ತದೆ.

ಮೃತ ನವಾಜ್‌ನ ಮದುವೆ ಹೀನಾ ಕೌಸರ್ ಎನ್ನುವವರ ಜೊತೆ ಮೊದಲು ಆಗಿತ್ತು ಎನ್ನುವುದು ಸರಿ. ಅವರಿಬ್ಬರು ಜೊತೆಯಲ್ಲೇ ವಾಸ ಮಾಡುತ್ತಿದ್ದರು. ಸದರಿ ಮೃತ ಸಾಯುವ ವೇಳೆಗೆ ಇಬ್ಬರು ಮಕ್ಕಳು ಹುಟ್ಟಿದ್ದರು, ಆತ ಸತ್ತ ನಂತರ ಮತ್ತೊಂದು ಮಗು ಸದರಿ ಹೀನಾ ಕೌಸರ್‌ಗೆ ಹುಟ್ಟಿರುತ್ತದೆ. ನವಾಜ್ ಸತ್ತ ಸಮಯದಲ್ಲಿ ಆತ ಮತ್ತು ಆತನ ಹೆಂಡತಿ ಹೀನಾ ಕೌಸರ್ ವಿಜಯನಗರ 4ನೇ ಕ್ರಾಸ್‌ನಲ್ಲಿ ವಾಸ ಮಾಡುತ್ತಿದ್ದರು. ಅವರ ಮನೆಯಿಂದ ನಮ್ಮ ಮನೆ ನಡೆದುಕೊಂಡು ಹೋದರೆ 10 ನಿಮಿಷದಲ್ಲಿ ಕ್ರಮಿಸಬಹುದು. ನವಾಜ್ ಸತ್ತಾಗ ಹೀನಾ ಕೌಸರ್‌ನ ಜೊತೆಯಲ್ಲೇ ವಾಸ ಮಾಡುತ್ತಿದ್ದ. ಸದರಿ ಹೀನಾ ಕೌಸರ್ ಈಗಲೂ ಇದ್ದಾರೆ.

ನವಾಜ್ ಎಷ್ಟು ಗಾಡಿ ಇಟ್ಟುಕೊಂಡಿದ್ದರು ಎಂದು ಪ್ರಶ್ನಿಸಲಾಗಿ ಒಂದೇ ಗಾಡಿ ಇಟ್ಟುಕೊಂಡಿದ್ದರು ಎಂದು ನುಡಿದಿದ್ದಾರೆ. ಆರ್ ಸಿ ಅವರ ಹೆಸರಿನಲ್ಲಿ ಇತ್ತಾ ಎಂದರೆ ಅಮ್ಜದ್ ಪಾಷನ ಹೆಸರಿನಲ್ಲಿತ್ತು ಎಂದು ನುಡಿದಿದ್ದಾರೆ. ಸದರಿ ನವಾಜ್ ಅಮ್ಜದ್ ಪಾಷನ ಹೆಸರಿನಲ್ಲಿದ್ದ ವಾಹನದ ಚಾಲಕನಾಗಿದ್ದ ಎಂದರೆ ನನಗೆ ಗೊತ್ತಿಲ್ಲ ಎಂದು ನುಡಿದಿದ್ದಾರೆ. ಸದರಿ ಅಮ್ಜದ್ ಪಾಷನ ಮನೆ ವೈಟ್‌ಫೀಲ್ಡ್‌ನಲ್ಲಿತ್ತು ಆದರೆ ಅವನು ಮಾಲೀಕನಾಗಿರಲಿಲ್ಲ ನಾನೇ ಹಣ ಕೊಟ್ಟು ಸದರಿ ವಾಹನವನ್ನು ಖರೀದಿ ಮಾಡಿದ್ದೆ ಎಂದು ನುಡಿದಿದ್ದಾರೆ. ಸದರಿ

ವಾಹನದ ಮಾಲೀಕತ್ವ ನವಾಜ್‌ನ ಹೆಸರಿನಲ್ಲಿರುವ ಬಗ್ಗೆ ನನಗೆ ಗೊತ್ತಿಲ್ಲ ಆದರೆ ನಾನು ಸದರಿ ನವಾಜ್‌ನಿಗೆ ಸದರಿ ವಾಹನವನ್ನು ಅಮ್ಜದ್ ಪಾಷನ ಕಡೆಯಿಂದ ಕೊಡಿಸಿದ್ದೆ ಆ ಬಗ್ಗೆ ದಾಖಲೆ ನನ್ನಲ್ಲಿ ಇರಬಹುದು ನೋಡಿ ಹೇಳುತ್ತೇನೆ. ಆ ಬಗ್ಗೆ ನನ್ನಲ್ಲಿ ಯಾವುದೇ ದಾಖಲೆ ಇಲ್ಲ ಆದರೆ ಅಮ್ಜದ್ ಪಾಷನ ಬಳಿ ದಾಖಲೆ ಇರಬಹುದು ಅದನ್ನು ನೋಡಿ ಹೇಳುತ್ತೇನೆ.

ಸಾಕ್ಷಿಗೆ ನ್ಯಾಯಾಲಯದ ಮುಂದಿರುವ ಒಬ್ಬ ಆರೋಪಿಯನ್ನು ತೋರಿಸಿ ಆ ಆರೋಪಿಯ ಹೆಸರು ನಿಮಗೆ ಗೊತ್ತಾ ಎಂದು ಪ್ರಶ್ನಿಸಲಾಗಿ ಸಾಕ್ಷಿ ಆತನ ಹೆಸರನ್ನು ಕಾರ್ತಿಕ್ ಎಂದು ಹೇಳಿರುತ್ತಾರೆ. ಸದರಿ ಆರೋಪಿಯ ಹೆಸರನ್ನು ನ್ಯಾಯಾಲಯ ಕೇಳಲಾಗಿ ರಕ್ಷಿತ್ ಎಂದು ನುಡಿದಿರುತ್ತಾನೆ.

ಸಾಕ್ಷಿಗೆ ನ್ಯಾಯಾಲಯದ ಮುಂದಿರುವ ಮತ್ತೊಬ್ಬ ಆರೋಪಿಯನ್ನು ತೋರಿಸಿ ಆ ಆರೋಪಿಯ ಹೆಸರು ನಿಮಗೆ ಗೊತ್ತಾ ಎಂದು ಪ್ರಶ್ನಿಸಲಾಗಿ ಸಾಕ್ಷಿ ಆತನ ಹೆಸರನ್ನು ಪವನ್ ಎಂದು ಹೇಳಿರುತ್ತಾರೆ. ಸದರಿ ಆರೋಪಿಯ ಹೆಸರನ್ನು ನ್ಯಾಯಾಲಯ ಕೇಳಲಾಗಿ ಕಾರ್ತಿಕ್ ಎಂದು ನುಡಿದಿರುತ್ತಾನೆ.

ಆಯಿಷಾ ಮನೆ ನಿಮ್ಮ ಮನೆಯಿಂದ ಎಷ್ಟು ದೂರದಲ್ಲಿದೆ ಎಂದು ಪ್ರಶ್ನಿಸಲಾಗಿ ಸುಮಾರು 3 ಕಿ.ಮಿ ದೂರದಲ್ಲಿದೆ ಎಂದು ನುಡಿದಿದ್ದಾರೆ. ಸಾಕ್ಷಿಗೆ ನೀವು ವೈಯಕ್ತಿಕವಾಗಿ ಅವರ ಮನೆಗೆ ಹೋಗಿಲ್ಲ ಎಂದರೆ ಹೋಗಿಲ್ಲ ಎಂದು ನುಡಿದಿದ್ದಾರೆ. ಅವರ ಮನೆ ನಂಬರ್ ಕ್ರಾಸ್ ನನಗೆ ಗೊತ್ತಿಲ್ಲ. ಸಾಕ್ಷಿಗೆ ರಕ್ತ ಬಿದ್ದಿತ್ತು ಎಂದು ಹೇಳುವ ರಸ್ತೆಯ ಅಗಲ ಸುಮಾರು 80 ರಿಂದ 100 ಅಡಿ ಇರಬಹುದು ಎಂದು ಪ್ರಶ್ನಿಸಲಾಗಿ ಸುಮಾರು 10 ರಿಂದ 15 ಅಡಿ ಇದೆ ಎಂದು ನುಡಿದಿದ್ದಾರೆ. ಆ ರಸ್ತೆಯಲ್ಲಿ ವಾಹನಗಳು ಜನಗಳು ಓಡಾಡುತ್ತಾರೆ, ಅಕ್ಕಪಕ್ಕದಲ್ಲಿ ಮನೆಗಳು ಇವೆ ಎನ್ನುವುದು ಸರಿ. ಸಾಕ್ಷಿಗೆ ಸಾಯುವುದಕ್ಕಿಂತ ಮುಂಚೆ ಎಷ್ಟು ದಿನಗಳ ಹಿಂದೆ ನವಾಜ್ ನಿಮ್ಮ ಮನೆಗೆ ಬಂದು ಹೋಗಿದ್ದ ಎಂದರೆ ಪ್ರತಿ ದಿನವೂ ಬಂದು ಹೋಗುತ್ತಿದ್ದ ಆದರೆ ಒಂದು ದಿನದ ಹಿಂದೆ ಮನೆಗೆ ಬಂದು ಹೋಗಿದ್ದ ಎಂದು ನುಡಿದಿದ್ದಾರೆ. ನಿಮ್ಮ ಮನೆ ಬಿಟ್ಟುಎಲ್ಲಿ ಹೋಗುತ್ತೇನೆ ಬರುತ್ತೇನೆ ಎಂದು ನಿಮಗೆ ಹೇಳುತ್ತಿರಲಿಲ್ಲ ಎಂದರೆ ಇಲ್ಲ ಎಂದು ನುಡಿದಿದ್ದಾರೆ. ಜಹೀರ್ ಎನ್ನುವವರು ನನ್ನನ್ನು ರಕ್ತ ಬಿದ್ದಿದ್ದ ಸ್ಥಳಕ್ಕೆ ಕರೆದುಕೊಂಡು ಹೋಗಿದ್ದರು. ಅವರು ವೈಟ್‌ಫೀಲ್ಡ್‌ನ ವಿಜಯನಗರದಲ್ಲಿ ವಾಸ ಮಾಡುತ್ತಾರೆ.

ಆ ರೀತಿ ಸದರಿ ಸ್ಥಳಕ್ಕೆ ಜಹೀರ್ ಎನ್ನುವವನು ಕರೆದುಕೊಂಡು ಹೋಗಿದ್ದ ದಿನಾಂಕ ಹೇಳಲು ನೆನಪಿರುವುದಿಲ್ಲ, ನಾವು ಸುಮಾರು ಅರ್ಧ ಗಂಟೆಗಳ ಕಾಲ ಅಲ್ಲಿದ್ದೆವು. ಆದರೆ ಸದರಿ ಅರ್ಧ ಗಂಟೆ ಎಷ್ಟು ಅವಧಿಯಿಂದ ಎಷ್ಟು ಅವಧಿ ಎಂದು ಹೇಳಲು ಆಗುವುದಿಲ್ಲ, ನೀವು ಆ ಸ್ಥಳಕ್ಕೆ ಹೋಗಿದ್ದಾಗ ಪೋಲೀಸರು ಬಂದರಾ ಎಂದರೆ ಅದು ಗೊತ್ತಿಲ್ಲ ಎಂದು ನುಡಿದಿದ್ದಾರೆ, ಪೋಲೀಸರು ಎಷ್ಟು ಗಂಟೆಗೆ ಬಂದು ಎಷ್ಟುಗಂಟೆಗೆ ಹೋದರು ಎಂದು ನಿಮಗೆ ಗೊತ್ತಿಲ್ಲ ಎಂದರೆ ನಾವು ಓದಿಲ್ಲ ಆದ್ದರಿಂದ ನನಗೆ ಹೇಳಲು ಆಗುವುದಿಲ್ಲ ಎಂದು ನುಡಿದಿದ್ದಾರೆ. ನಾವು ದೂರು ಕೊಟ್ಟ ನಂತರ ಪೋಲೀಸರು ಸ್ಥಳಕ್ಕೆ ಬಂದು ಪರಿಶೀಲನೆ ಮಾಡಿದ್ದಾರೆ. ದೂರು ಕೊಟ್ಟ ದಿನವೇ ಪೋಲೀಸರು ಸ್ಥಳಕ್ಕೆ ಬಂದಿದ್ದರು. ಪೋಲೀಸರು ಸ್ಥಳದಲ್ಲಿ ಬರವಣಿಗೆ ಮಾಡಿಲ್ಲ ಎಂದರೆ ಮಾಡಿದ್ದಾರೆ ಎಂದು ನುಡಿದಿದ್ದಾರೆ.

ದೂರು ಕೊಟ್ಟ ನಂತರ ನಾನು ಪೋಲೀಸ್ ಠಾಣೆಗೆ ಹತ್ತು ದಿನಗಳ ಕಾಲ ಹೊಗುತ್ತಿದ್ದೆ. ಎಫ್ ಐ ಆರ್ ಮತ್ತು ಕಂಪ್ಲೆಂಟ್ ಕೊಟ್ಟಾಗ ಪೋಲೀಸ್ ಠಾಣೆಯಲ್ಲಿ ಸಹಿ ಮಾಡಿದ್ದೇನೆ ಆದರೆ ನಿಖರವಾಗಿ ಹೇಳಲು ನೆನಪಿರುವುದಿಲ್ಲ, ಸಾಕ್ಷಿಗೆ ನಿ.ಪಿ 2ನ್ನು ತೋರಿಸಿ ಅದರಲ್ಲಿರುವ ಸಹಿ ಪೋಲೀಸ್ ಠಾಣೆಯಲ್ಲಿ ಮಾಡಿದ್ದೀರಾ ಎಂದರೆ ಸಹಿ ಮಾಡಿದ್ದೇನೆ ಆದರೆ ಎಲ್ಲಿ ಮಾಡಿದ್ದೇನೆ ಎಂದು ಹೇಳಲು ಗೊತ್ತಾಗುವುದಿಲ್ಲ ಎಂದು ನುಡಿದಿದಾಗ ನ್ಯಾಯಾಲಯವು ಸದರಿ ದಾಖಲೆ ಮಹಜರ್ ಮತ್ತು ಮಹಜರ್ ಮಾಡಿದ ಸ್ಥಳ ಹೇಳಿದಾಗ ಆ ದಾಖಲೆಗೆ ಸ್ಥಳದಲ್ಲಿ ಸಹಿ ಮಾಡಿದ್ದೇನೆ ಎಂದು ನುಡಿದಿದ್ದಾರೆ.

ಸಾಕ್ಷಿಗೆ ನಿಪಿ 2ರಲ್ಲಿ ಬರೆದಿರುವ ವಿಚಾರಗಳು ಗೊತ್ತಿಲ್ಲ ಎಂದರೆ ಪೋಲೀಸರು ಮಹಜರ' ಮಾಡಿದ್ದೇವೆ ಸಹಿ ತೆಗೆದುಕೊಳ್ಳುತ್ತೇವೆ ಎಂದು ಹೇಳಿದರು, ನನಗೆ ಓದಲು ಬರುವುದಿಲ್ಲ ಆದ್ದರಿಂದ ಅದರಲ್ಲಿ ಬರೆದಿರುವ ಎಲ್ಲಾ ವಿಷಯಗಳು ನನಗೆ ಗೊತ್ತಿಲ್ಲ ಎಂದು ನುಡಿದಿದ್ದಾರೆ, ಸದರಿ ದಾಖಲೆಯ ಮೇಲೆ ಸಹಿ ಮಾಡಿದ ಸಮಯ ಹೇಳಲು ಆಗುವುದಿಲ್ಲ, ಪೋಲೀಸರು ಅಕ್ಕಪಕ್ಕದವರನ್ನು ಕರೆದರಾ ಅಥವಾ ಇಲ್ಲವಾ ಎಂದು ಪ್ರಶ್ನಿಸಲಾಗಿ, ಅಕ್ಕಪಕ್ಕದವರನ್ನು ವಿಚಾರಿಸಿದರು ಎಂದು ನುಡಿದಿದ್ದಾರೆ. ಅಕ್ಕಪಕ್ಕದವರು ಮಹಜರ್‌ಗೆ ಸಹಿ ಮಾಡಿದ್ದಾರ ಇಲ್ಲವಾ ಎಂದು ಪ್ರಶ್ನಿಸಲಾಗಿ ಗೊತ್ತಿಲ್ಲ ಎಂದು ನುಡಿದಿದ್ದಾರೆ. ಸದರಿ ದಾಖಲೆಗೆ ಯಾರು ಸಹಿ ಮಾಡಿದರು ಎಂದು ನಿಮಗೆ ವೈಯಕ್ತಿಕವಾಗಿ ಗೊತ್ತಿಲ್ಲ ಎಂದರೆ ಗೊತ್ತಿಲ್ಲ

ಎಂದು ನುಡಿದಿದ್ದಾರೆ, ಅದನ್ನು ಬರೆದವರು ಸಹಿ ಮಾಡಿದ್ದಾರೋ ಇಲ್ಲವೋ ನನಗೆ ಗೊತ್ತಿಲ್ಲ. ಆ ಸ್ಥಳದಲ್ಲಿ ಬೇರೆ ಯಾವ ದಾಖಲೆಗಳಿಗೆ ಸಹಿ ಮಾಡಿದ್ದೇನೆ ಎಂದು ನನಗೆ ಗೊತ್ತಿಲ್ಲ.

ಈ ಸಂದರ್ಭದಲ್ಲಿ ವರ್ತೂರು ಪೋಲೀಸ್ ಠಾಣೆಯ ಪೋಲೀಸ್ ಪೇದೆ ಹಾಜರಿಲ್ಲದೇ ಇರುವುದರಿಂದ ಆರೋಪಿಗಳ ಪರ ವಕೀಲರು ಗುರುತು ಮಾಡಿರುವ ವಸ್ತುಗಳು ಬೇಕು ಎಂದು ಹೇಳಿರುವುದರಿಂದ ಅವುಗಳನ್ನು ಹಾಜರು ಪಡಿಸಲು ಯಾರೂ ಇಲ್ಲದೇ ಇರುವುದರಿಂದ ಕಾಲಾವಕಾಶ ನೀಡಲಾಯಿತು.

{ಮೇಲ್ಕಂಡ ಸಾಕ್ಷ್ಯವನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಿದೆ.}

ಓ. ಹೇ. ಸಾ. ಸ. ಸಹಿ ಮಾಡಿದ್ದಾರೆ.

(ಜೆ.ವಿ ವಿಜಯಾನಂದ)
9ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಬೆಂಗಳೂರು ಗ್ರಾಮಾಂತರ ಜಿಲ್ಲೆ, ಬೆಂಗಳೂರು.